ವಿತ್ತೀಯ ಕಾರ್ಯಕಲಾಪಗಳು

೧೯೮೬–೮೭ನೇ ಸಾಲಿನ ಅನುಪೂರಕ ಅಂದಾಜುಗಳನ್ನೊಪ್ಪಿಸುವುದು

ಶ್ರೀ ಎ. ಲಕ್ಷ್ಮೀಸಾಗರ್— ಮಾನ್ಯ ಮುಖ್ಯಮಂತ್ರಿಗಳ ಹೆಸರಿನ ಮುಂದಿರುವ ಭಾರತ ಸಂವಿಧಾನದ ೨೦೫(೧)ನೇ ಅನುಚ್ಛೇದದ ಮೇರೆಗೆ ೧೯೮೬–೮೭ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಗಳನ್ನು (ಮೊದಲನೆ ಕಂತು) ಸಭೆಯ ಮುಂದೆ ಮುಂಡಿಸುತ್ತೇನೆ.

ಅಧ್ಯಕ್ಷರು— ಅನುಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಕೆಲಸವನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ— ರಾಜ್ಯದ ಸುಮಾರು ಹತ್ತು ಸಾವಿರ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರು ತಮ್ಮ ಸೇವೆಯನ್ನು ಖಾಯಂ ಮಾಡಬೇಕೆಂದು ಬೃಹತ್ ಪ್ರದರ್ಶನ ನಡೆಸಿರುವ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು)— ಕರ್ನಾಟಕ ರಾಜ್ಯದ ಶಾಲಾ ಮತ್ತು ಕಾಲೇಜುಗಳಲ್ಲಿ ಗಂತ್ತಿಗೆ ಆಧಾರದ ಮೇಲೆ ಉಪಾಧ್ಯಾಯರುಗಳು ಮತ್ತು ಉಪನ್ಯಾಸಕರುಗಳ ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗಬಾರದೆಂಬ ಕಾರಣಕ್ಕಾಗಿ ಇವರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಇವರುಗಳಿಗೆ ಆ ವರ್ಗದ ಅಧಿಕಾರಿಗಳ ಅಥವಾ ಉಪಾಧ್ಯಾಯರುಗಳ ಅಥವಾ ಉಪನ್ಯಾಸಕರುಗಳು ಪಡೆಯುತ್ತಿರುವ ವೇತನ ಶ್ರೇಣಿಯ ಮೂಲ ವೇತನಕ್ಕಿಂತ ಕನಿಷ್ಠ ೧೦ ರೂ.ಗಳಷ್ಟು ಕಡಿಮೆ ಸಂಬಳ ಕೊಡಲಾಗುತ್ತಿದೆ. ಇವರ ನೇಮಕಾತಿಯು ಆಜ್ಞೆಯಲ್ಲಿಯೇ ಈ ಕೆಲಸ ಪೂರ್ಣ ತಾತ್ಕಾಲಿಕವೆಂದೂ ಮತ್ತು ಇವರು ನೇರ ನೇಮಕಾತಿ ಅಭ್ಯರ್ಥಿಗಳು ಬಂದೊಡನೆ ಅಥವಾ ಅದಕ್ಕೂ ಮೊದಲೇ ಕೆಲಸ ಬಿಡಬೇಕಾಗಬಹುದೆಂದು ತಿಳಿಸಲಾಗಿದೆ. ಈ ರೀತಿಯ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುವುದು. ಈಗಾಗಲೇ ಕೆಳವರ್ಗದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರು ನ್ಯಾಯಾಲಯಕ್ಕೆ ಹೋಗಿದ್ದು ಅವರ ಸೇವೆಯನ್ನು ನ್ಯಾಯಾಲಯದ ಆದೇಶದಂತೆ ಮುಂದುವರಿಸಲಾಗುತ್ತಿದೆ. ಮುಂದೆ ನ್ಯಾಯಾಲಯದ ತೀರ್ಮಾನ ಬಂದ ನಂತರ ಈ ವರ್ಗದ ನೌಕರರ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸಿ ವಿಷಯವನ್ನು ಸಚಿವ ಸಂಪುಟದ ಸಭೆಯು ಮುಂದೆ ತಂದು ಸೂಕ್ತ ಕ್ರಮಕೈಗೊಳ್ಳಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಹನ್ನೊಂದುವರೆ ಸಾವಿರ ಜನ ಶಿಕ್ಷಕರು ಬೆಂಗಳೂರಿಗೆ ಬಂದು ಪ್ರದರ್ಶನ ಮಾಡಿ ತಮ್ಮ ಅಹವಾಲನ್ನು ತಿಳಿಸಿದ್ದಾರೆ. ಮಂತ್ರಿಗಳು ಸಹ ಭರವಸೆಯನ್ನು ಕೊಟ್ಟಿದ್ದಾರೆ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ ಸುಮಾರು ೨೭ ಸಾವಿರ ಹುದ್ದೆಗಳು ಖಾಲಿಯಿವೆ, ಈಗ ಹನ್ನೊಂದೂ ಸಾವಿರ ಹುದ್ದೆಗಳನ್ನು ಭರ್ತಿಮಾಡಿದರೂ ಇನ್ನೂ ೧೫ರಿಂದ ೧೬ ಸಾವಿರ ಹುದ್ದೆಗಳು ಖಾಲಿ ಇರುತ್ತವೆ. ಹುದ್ದೆಗಳನ್ನು ಭರ್ತಿಮಾಡುವಾಗ ರೋಸ್ಟರ್ ಸಿಸ್ಟಮ್ ಪದ್ಧತಿಯನ್ನು ಅನುಸರಿಸಿ ಕಾನೂನಿನ ಚೌಕಟ್ಟಿನಲ್ಲಿ ನೇಮಕ ಮಾಡಿದ್ದೀರಾ ? ಎಗ್ಸಿಸ್ಟಿಂಗ್ ಕ್ಲೀಯರ್ ವೇಕೆನ್ಸಿ ಎಲ್ಲಿವೆ ಅಲ್ಲಿ ನೇಮಕ ಮಾಡಲಾಗಿದೆಯೇ ? ಮೆರಿಟ್ ಆಧಾರದ ಮೇಲೆ ಕಾನೂನುಬದ್ಧವಾಗಿ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೀರಾ ? ಮೂಸಲಾತಿ ಪದ್ಧತಿಗೆ ತೊಂದರೆಯಾಗಿಲ್ಲವೆ? ಕಳೆದ ಎರಡು ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದು ಅವರಿಗೆ ಯಾವುದೇ ರೀತಿಯ ಸೌಲಭ್ಯ ಸಿಗದಿರುವುದರಿಂದ ಅವರು ಹೈಕೋರ್ಟ್‌ಗೆ ಹೋಗಿದ್ದಾರೆ, ಆದರೂ ಕೂಡ ಅವರಲ್ಲಿ ಪಾಸ್ಸು ತೆಗೆದುಕೆ ಳಳ್ಳುವುದಕ್ಕೆ ಸಿದ್ಧರಾಗಿದ್ದಾರೆ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರನ್ನು ಖಾಯಂಗೊಳಿಸುವುದಾಗಿ ಸ್ಪಷ್ಟವಾಗಿ ಮಂತ್ರಿಗಳು ಹೇಳಿಕೆಯನ್ನು ಕೊಟ್ಟು

ಬಂದಿದ್ದಾರೆ, ಇದು ಜಾರಿಕೆಯ ಉತ್ತರವಾಗುತ್ತದೆ, ಪಾರ್ಮುಖ್ಯವಾಗಿ ಶಿಕ್ಷಣಕ್ಷೇತ್ರದಲ್ಲಿನ ಮುಂದಿನ ಪೀಳಿಗೆಯವರಿಗೆ ಪಾಠಪ್ರವಚನ ಮಾಡತಕ್ಕವರಿಗೆ ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು. ಹಂಗಾಮಿಯಾಗಿ ಯಾರನ್ನು ತೆಗೆದುಕೊಂಡಿದ್ದೀರಿ ಅಂತಹವರನ್ನು ಖಾಯಂ ಮಾಡಿದ್ದೀರಾ ? ಇಲ್ಲದಿದ್ದರೆ ಕಾನೂನುಬದ್ಧವಾಗಿ ರೋಸ್ಟರ್ ಸಿಸ್ಟಮ್ ಪ್ರಕಾರ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಹಿಂದೆ ಮುಂದೆ ನೋಡುತ್ತಿದ್ದೀರಿ ? ಇವತ್ತಿನ ದಿವಸ ರಿಕ್ರೂಟ್‌ಮೆಂಟ್ ಕಮಿಟಿ ಮಾಡಿ ಕ್ಯಷಿತವಾಗಿ ತೆಗೆದುಕೊಂಡಿದ್ದೀರಾ ? ಸರ್ಕಾರದ ಒಂದು ತಪ್ಪಿನ ಕಾರಣಕ್ಕೋಸ್ಕರ, ಹಾಗೂ ನೇಮಕಾತಿಯನ್ನು ಮಾಡಿಲ್ಲವೆಂಬ ಇನ್ನೊಂದು ಕಾರಣಕ್ಕೋಸ್ಕರ ಕಾನೂನು ಬದ್ಧವಾಗಿ ಅವರನ್ನು ನೇಮಕ ಮಾಡಿಕೊಂಡಿದ್ದರೂ ಅವರಿಗೆ ಕಾಯಂ ಮಾಡಿಲ್ಲ, ರೋಸ್ಟರ್ ಪದ್ಧತಿಯನ್ನು ಅನುಸರಿಸಿಲ್ಲ ಎಂಬುದಾಗಿ ಹೇಳುವ ಹಾಗಿಲ್ಲ. ಖಾಲಿ ಇರತಕ್ಕಂತಹ ಹುದ್ದೆಗಳನ್ನು ಭರ್ತಿ ಮಾಡುವಾಗ ಮೆರಿಟ್ ಆಧಾರದ ಮೇಲೆ ಯಾವ ರೀತಿ ನೇಮಕ ಮಾಡುತ್ತಾರೋ ಅದೇ ರೀತಿ ನೇಮಕ ಮಾಡಿದ್ದೀರಿ. ಸ್ಥಳೀಯ ಅಭ್ಯರ್ಥಿಗಳನ್ನು ಕಾನೂನು ಬದ್ಧವಾಗಿಯೇ ನೇಮಕ ಮಾಡಿಕೊಂಡಿದ್ದೀರಿ, ಅವರು ಕರೆದಂತಹ ಒಂದು ಸಮ್ಮೇಳನಕ್ಕೆ ಸನ್ಮಾನ್ಯ ವಿದ್ಯಾಸಚಿವರು ಹೋಗಿದ್ದಾಗ ಅಲ್ಲಿ ಅವರನ್ನು ಕಾಯಂ ಮಾಡುವ ಬಗ್ಗೆ ಭರವಸೆ ಕೊಟ್ಟು ಬಂದಿದ್ದಾರೆ ಎಂದು ತಿಳಿದು ಬಂದಿದೆ. ಇವತ್ತು ನೀವು ಅವರನ್ನು ಖಾಯಂ ಮಾಡುತ್ತೇವೆಂದರೆ, ಅವರು ಹೈಕೋರ್ಟಿನಲ್ಲಿರತಕ್ಕ ಕೇಸನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆ. ಆ ಬಗ್ಗೆ ನಮಗೆ ಸ್ಪಷ್ಟವಾದ ಆಶ್ವಾಸನೆ ಮಾನ್ಯ ಮಂತ್ರಿಗಳಿಂದ ಬೇಕು. ಇದರ ಬಗ್ಗೆ ಸರ್ಕಾರದ ಅಭಿಪ್ರಾಯವನ್ನು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಡಿ. ಮಂಜುನಾಥ್.—ನನ್ನ ಹೇಳಿಕೆಯಲ್ಲಿ ಅದನ್ನೇ ಹೇಳಿದ್ದೇನೆ. ಅದರ ಜೊತೆಗೆ ಈ ಸಮಸ್ಯೆ ಯಾವಾಗ ಉದ್ಭವಿಸಿತು ಎಂದರೆ, ಲೋಕಲ್ ಕ್ಯಾಂಡಿಡೇಟ್ಸನ್ನು ರೆಗ್ಯುಲರೈಸ್ ಮಾಡಿದ ಮೇಲೆ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರನ್ನು ಖಾಯಂಮಾಡುತ್ತಾ ಬಂದಿದ್ದೇವೆ. ನೇಮಕಾತಿಯನ್ನು ಮಾಡುವಾಗ ಮೆರಿಟ್ ಆಧಾರದ ಮೇಲೆ ಮಾಡಿದ್ದಾರೆ. ರೋಸ್ಟರ್ ಪದ್ಧತಿಯನ್ನು ಅನುಸರಿಸಿಯೇ ಮಾಡಿದ್ದಾರೆ. ಆದರೆ ಆ ಕೇಸು ಈಗ ಸುಪ್ರೀಂ ಕೋರ್ಟಿನ ಮುಂದೆ ಇದೆ. ತೀರ್ಮಾನ ಏನಾಗುತ್ತದೋ ನೋಡೋಣ. ನಾವು ಅವರನ್ನು ಮನೆಗೆ ಕಳುಹಿಸಬೇಕೆಂಬ ಉದ್ದೇಶ ನಮಗಿಲ್ಲ. ೧೦ ೪೦೦ ಜನ ಅವರು ಇದ್ದಾರೆ, ಸುಪ್ರೀಂ ಕೋರ್ಟ್ ಏನು ತೀರ್ಮಾನ ಕೊಡುತ್ತದೋ ನೋಡೋಣ. ಅವರನ್ನು ಮನೆಗೆ ಕಳುಹಿಸುತ್ತೇವೆಂದು ನಾವು ಎಲ್ಲೂ ಹೇಳಿಲ್ಲ. ಅವರು ಕರೆದಿದ್ದಂಥ ಸಮ್ಮೇಳನ ಒಂದರಲ್ಲಿ ಖಾಯಂ ಮಾಡುತ್ತೇನೆಂಬ ಭರವಸೆ ನೀಡಿ ಬಂದಿದ್ದೇನೆ ಎಂಬುದಾಗಿ ಹೇಳಿದರು. ಆದರೆ ನಾನು ಅಲ್ಲಿ ಹೇಳಿದ್ದು ಏನೆಂದರೆ ಸರ್ಕಾರಕ್ಕೆ ನಿಮ್ಮ ಬಗ್ಗೆ ಅನುಕಂಪ ಇದೆ. ಒಳ್ಳೆಯ ಕೆಲಸ ಮಾಡಿದ್ದೀರಿ. ನಿಮ್ಮ ವಿಚಾರವನ್ನು ಸಚಿವ ಸಂಪುಟದ ಮುಂದೆ ತರುತ್ತೇನೆ. ಆ ಬಗ್ಗೆ ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳುತ್ತದೆ ಎಂಬುದಾಗಿ ಹೇಳಿದ್ದೇನೆ ಅಷ್ಟೆ.

ಶ್ರೀ ಪಂಪಾಪತಿ.—ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೀರಿ. ಈಗಾಗಲೇ ಶ್ರೀಮಾನ್ ಯಾಡಿಯೂರಪ್ಪನವರು ಇದರ ಬಗ್ಗೆ ಎಲ್ಲ ವಿಷಯವನ್ನು ವಿವರವಾಗಿ ಹೇಳಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲರನ್ನು ಕ್ರಮಬದ್ಧವಾಗಿ ನೇಮಕ ಮಾಡಿಕೊಂಡಿದ್ದರೂ ಅವರಿಗೆ ಖಾಯಂ ಮಾಡಿಲ್ಲ, ಎನ್ನುವ ಕಾರಣಕ್ಕಾಗಿ ಅವರ ಒಳ ಮನಸ್ಸು ಕೊರಗುತ್ತಿರುವುದರಿಂದ, ಹೆಚ್ಚು ಆಸಕ್ತಿಯಿಂದ ಅವರುಗಳು ನಮ್ಮ ಪಾಠಪ್ರವಚನಗಳನ್ನು ಮಾಡುವುದಕ್ಕೆ ಇಷ್ಟಾಗಿ ಮನಸ್ಸುಗುವುದಿಲ್ಲ. ಇವತ್ತು ಅವರನ್ನು ಕಾಯಂ ಮಾಡುವುದಕ್ಕೆ ಸರ್ಕಾರಕ್ಕೆ ಇರತಕ್ಕಂತಹ ತೊಂದರೆಯಾದರೂ ಏನು ಎಂಬುದು ಗೊತ್ತಿಲ್ಲ. ತೊಂದರೆ ಏನೂ ಇಲ್ಲವೆಂದು ನನಗನ್ನಿಸುತ್ತದೆ. ಅವರನ್ನು ನೀವು ಕಾಯಂ ಮಾಡುವುದಾದರೆ, ಅವರು ಕೋರ್ಟಿನಲ್ಲಿರತಕ್ಕ ಕೇಸನ್ನೂ ಕೂಡ ವಾಪಸ್ಸು ತೆಗೆದುಕೊಳ್ಳುತ್ತಾರೆ. ಅವರು ತಮ್ಮ ಕರ್ತವ್ಯದಲ್ಲಿ ಗಮನಹರಿಸಬೇಕೆಂದಿದ್ದರೆ, ಅವರನ್ನು ಖಾಯಂ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಅವರಿಗೆ ವಯಸ್ಸಾಗುತ್ತಿದೆ. ವಯಸ್ಸು ಆದ ಮೇಲೆ ಅವರನ್ನು ಖಾಯಂ ಮಾಡದಿದ್ದರೆ, ನಾಳೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಉದ್ಯೋಗ ಸಿಕ್ಕುವುದಿಲ್ಲ. ಅವರನ್ನು ಮನೆಗೆ ಕಳುಹಿಸತಕ್ಕಂತಹ ಪರಿಸ್ಥಿತಿ ಬರುತ್ತದೆ. ಅವರ ಜೀವನಕ್ಕೇ ಬಹಳ ಕಷ್ಟಪರಿಸ್ಥಿತಿ ಬರುತ್ತದೆ. ತಾವು ಅವರ ಬಗ್ಗೆ ಬಹಳ ದೊಡ್ಡ ಮನಸ್ಸು ಮಾಡಿ ಅವರನ್ನು ಖಾಯಂ ಮಾಡುವುದಕ್ಕೆ ಎಲ್ಲ ರೀತಿಯ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎ. ಉಮಾರಬ್ಬ.—ಸನ್ಮಾನ್ಯ ಅಧ್ಯಕ್ಷರೆ, ಗುತ್ತಿಗೆ ಆಧಾರದ ಮೇಲೆ ನೇಮಕ ಗೊಂಡಿರ ಇಂತಹ ಶಿಕ್ಷಕರನ್ನು ಖಾಯಂ ಮಾಡುವ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಹಾಗೂ ಮಾನ್ಯ ಸರ್ಕಾರ ಅವರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಪ್ರಯತ್ನ ಮಾಡಬೇಕು. ಶಿಕ್ಷಣದ ಬಗ್ಗೆ ಇರುವಷ್ಟೇ ಕಾಳಜಿಯನ್ನು ಅಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಶಿಕ್ಷಕರ ಬಗ್ಗೆಯೂ ತಾವು ವಹಿಸಬೇಕು. ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂತಹ ಪದ್ಧತಿಯೇ ತಪ್ಪು. ಏಕೆಂದರೆ ಬಾಂಡೆಡ್ ಲೇಬರ್ಸ್‌ನ ಕಾನೂನಿನ್ವಯ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂತಹದ್ದು ಅಷ್ಟೇ ತಪ್ಪು. ಅವರನ್ನು ಕೂಡಲೇ ಕಡ್ತಾಯ ಮಾಡಿ. ಅವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ದುಡಿಸಿಕೊಂಡು ನಂತರ ಮನೆಗೆ ಕಳುಹಿಸುವಂತಹದ್ದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯ. ಆಡಳಿತಾತ್ಮಕವಾದ, ಅಥವಾ ತಾಂತ್ರಿಕವಾದ ಆಥವಾಯಾವುದೇ ರೀತಿಯ ಕಾನೂನಿನ ತೊಡಕು ಇಲ್ಲ, ಏಕೆಂದರೆ ಅವರು ಬಹಳ ಕಾನೂನು ಬದ್ಧವಾಗಿಯೇ, ನಿಯಮಗಳನ್ನು ಪಾಲಿಸಿಯೇ, ರೋಸ್ಟರ್ ಪದ್ಧತಿಯನ್ನೂ ಕೂಡ ಕಟ್ಟು ನಿಟ್ಟಾಗಿ ಅನುಸರಿಸಿ ನೇಮಕ ಮಾಡಿದ್ದಾರೆ, ಅಂತಹವರು ಇಂದು ೧೦,೪೦೦ ಜನರು ಇದ್ದಾರೆ. ನಿಮಗೆ ಶಿಕ್ಷಣದ ಬಗ್ಗೆ ಕಾಳಜಿ ಇರುವುದಾದರೆ, ಯಾವ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಇದ್ದಾರೆ ಅಂಥ ಶಿಕ್ಷಕರನ್ನು ಮೊದಲು ಖಾಯಂ ಮಾಡಿ. ಶಿಕ್ಷಣ ಪಂಟ್ಟವನ್ನು ಹೆಚ್ಚಿಸುವ ಬಗ್ಗೆ ಪುಸ್ತಕ ಕೊಟ್ಟಿದ್ದೀರಿ, ಬಟ್ಟೆ – ಸಮವಸ್ತ್ರ ಕೊಟ್ಟಿದ್ದೀರಿ ಅಷ್ಟೇ ಆಸಕ್ತಿಯಿಂದ ಇವತ್ತು ಇವರನ್ನು ಖಾಯಂ ಮಾಡಿ, ಇವತ್ತು ನಮ್ಮಲ್ಲಿ ಜೀತ ಪದ್ಧತಿ ರದ್ದಾಗಿದೆ. ಅದೇ ರೀತಿ ಕಂಟ್ರಾಕ್ಟ್ ಆಧಾರದ ಮೇಲೆ ನೇಮಕಾತಿ ಮಾಡುವುದೂ ಕೂಡ ರದ್ದಾಗಬೇಕು. ಇಷ್ಟೆಲ್ಲಾ ಹೇಳಿದರೂ ಕೂಡ ಇವತ್ತು ಕೂಡ ಗುತ್ತಿಗೆ ಆಧಾರದ ಮೇಲೆ ಪುನಃ ನೇಮಕ ಮಾಡುತ್ತಿದ್ದೀರಿ. ಆಗಸ್ಟ್ ೭ನೇ ತಾರೀಖಿನಂದು ಮತ್ತೆ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ತೆಗೆದುಕೊಳ್ಳುತ್ತಿದ್ದೀರಿ. ೨೪,೦೦೦ ಶಿಕ್ಷಕರ ಅವಶ್ಯಕತೆ ಇದೆ ಎಂಬುದು ಗೊತ್ತಿದ್ದರೂ ಸಹ, ಇರತಕ್ಕಂತಹವರನ್ನು ಖಾಯಂ ಮಾಡಿ ಮತ್ತೆ ಖಾಯಂ ಆಧಾರದ ಮೇಲೆ ನೇಮಕ ಮಾಡುವುದನ್ನು ಬಿಟ್ಟು ಪುನಃ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡುವುದು ಯಾವ ನ್ಯಾಯ ? ಗುತ್ತಿಗೆ ಆಧಾರದ ಮೇಲೆ ಈಗಾಗಲೇ ಇರುವವರಿಗೆ ವಯಸ್ಸು ಕೂಡ ಮೀರುತ್ತಿದೆ. ಅವರಿಗೆ ಸಾಕಷ್ಟು ಅನುಭವ ಇದೆ. ಬಹುಪಾಲು ಸಂಸಾರಸ್ಥರಾಗಿದ್ದಾರೆ. ಅವರನ್ನು ಖಾಯಂ ಮಾಡಬೇಕೆಂದು ಈ ಸದನದ ಮೂಲಕ ಆ ಶಿಕ್ಷಕರ ಪರವಾಗಿ ನಾನು ತಮ್ಮನ್ನು ಬೇಡಿಕೊಳ್ಳುತ್ತೇನೆ. ಇವತ್ತು ಅವರನ್ನು ಖಾಯಂ ಮಾಡುವ ಬಗ್ಗೆ ಈ ಸದನದಲ್ಲಿ ಭರವಸೆಯನ್ನು ಕೊಡುವುದಾದರೆ, ಅತ್ಯಂತ ಕಡಿಮೆ ಸಮಯದಲ್ಲಿ ಸುಪ್ರೀಂ ಕೋರ್ಟಿನಲ್ಲಿ ೧೦,೪೦೨ ಶಿಕ್ಷಕರ ಪರವಾಗಿ ವಿಸೊಂದು ಕೇಸು ಇವೆ, ಅದರ ಬಗ್ಗೆ ಅವರ ಹತ್ತಿರ ಮಾತನಾಡಿ ಕೋರ್ಟಿನಲ್ಲಿ ಯಾವುದು ಆರ್ಜಿ ಇದೆ, ಯಾವುದು ತಕರಾರು ಇದೆ. ಅದನ್ನು ಕೂಡಲೇ ಹಿಂತೆಗೆದುಕೊಳ್ಳುತ್ತೇವೆ. ಆದರೆ ಅವರನ್ನು ತಕ್ಷಣವೇ ಖಾಯಂ ಮಾಡಬೇಕು. ಏಕೆಂದರೆ ಅವರನ್ನು ನೇಮಕ ಮಾಡುವಾಗ ಕಾನೂನು ಬದ್ಧವಾಗಿಯೇ ನೇಮಕ ಮಾಡಿದ್ದಾರೆ.

ಶ್ರೀ ಡಿ. ಮಂಜುನಾಥ್.—ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂತಹ ಪದ್ಧತಿ ೧೯೮೪ ರಿಂದಲೇ ಪ್ರಾರಂಭವಾಗಿದೆ. ಇದಕ್ಕೆ ಕಾರಣವೇನೆಂದರೆ, ನಮ್ಮ ಇಲಾಖೆಯಲ್ಲಿ ನೇಮಕಾತಿಯನ್ನು ಮಾಡದೇ ಇರುವುದರಿಂದ ಈ ಒಂದು ಪರಿಸ್ಥಿತಿ ಬಂದಿದೆ. ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆ ಇಷ್ಟು ಕೊಡುತ್ತೇನೆ. ಅವರ ಬಗ್ಗೆ ನಮಗೂ ಅನುಕಂಪ ಇದೆ. ಅವರನ್ನು ಮನೆಗೆ ಕಳುಹಿಸಬೇಕೆಂಬ ಇಚ್ಛೆ ಸರ್ಕಾರಕ್ಕಂತೂ ಇಲ್ಲ. ಇದರ ಬಗ್ಗೆ ಒಂದು ಕೇಸು ಕೋರ್ಟಿನ ಮುಂದೆ ಇದೆ. ಕೋರ್ಟು ಯಾವ ರೀತಿ ತೀರ್ಮಾನ ಕೊಡುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದರ ಬಗ್ಗೆ ಅನುಕಂಪ ಇದೆ. ನೇಮಕಾತಿಯನ್ನು ರೋಸ್ಟರ್ ಪ್ರಕಾರ ಮಾಡಿದ್ದಾರೆ. ಮೆರಿಟ್ ಪ್ರಕಾರ ನೇಮಕಾತಿಯನ್ನು ಮಾಡಿದ್ದಾರೆ. ಇದನ್ನು ಸಾನೊಬ್ಬನೇ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇದನ್ನು ಸಚಿವ ಸಂಪುಟದ ಮುಂದೆ ತರುತ್ತೇನೆ. ಸಚಿವ ಸಂಪುಟ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ.

ಏಕೆಂದರೆ ಲೋಕಲ್ ಕ್ಯಾಂಡಿಡೇಟ್ಸ್ ಬಹಳ ವರ್ಷಗಳಿಂದ ಇದ್ದರು. ಅವರಿಗೆ ನಮ್ಮ ಸರ್ಕಾರ ಜೂನ್‌ನಲ್ಲಿ ತೀರ್ಮಾನ ಮಾಡಿ ಅನುಕೂಲ ಮಾಡಿದ್ದು ಯಿತು. ಆದಾದಮೇಲೆ ಗುತ್ತಿಗೆದಾರರು ನಮ್ಮನ್ನು ಖಾಯಂ ಮಾಡಿ ಎಂದು ಬಂದಿದ್ದಾರೆ. ಅವರ ಬೇಡಿಕೆ ಸರಿಯಾಗಿದೆ ಎಂದು ಕಂಡುಬಂದಿದೆ, ಅವರ ಬಗ್ಗೆ ಅನುಕಂಪ ಇದೆ. ಅವರ ಬೇಡಿಕೆಯನ್ನು ಪರಿಶೀಲನೆಮಾಡಿ ಸಚಿವ ಸಂಪುಟದ ಮುಂದೆ ತರುತ್ತೇನೆ. ಆ ಬಗ್ಗೆ ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.— ಅವರಿಗೆ ಮೂಲ ವೇತನಕ್ಕಿಂತ ಹತ್ತು ರೂಪಾಯಿ ಕಡಿಮೆ ಕೊಡುತ್ತೀರಿ, ಜೊತೆಗೆ ಡಿ. ಎ. ಇಲ್ಲ, ಪ್ರೊವೋಷನ್ ಇಲ್ಲ. ಅವರು ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಲೋಕಲ್ ಕ್ಯಾಂಡಿಡೇಟ್ಸ್‌ಗೆ ಯಾವ ಪದ್ಧತಿಯನ್ನು ಅನುಸರಿಸುತ್ತಿದ್ದೀರೋ ಅದೇ ಪದ್ಧತಿಯನ್ನು ಇವರಿಗೂ ಅನುಸರಿಸುತ್ತೇವೆಂದು ಗೋವಿಂದೇಗೌಡರು ಕಳೆದ ಅಧಿವೇಶನದಲ್ಲಿ ಭರವಸೆ ಕೊಟ್ಟಿದ್ದರು. ೨೬ಸಾವಿರ ಹುದ್ದೆಗಳು ಖಾಲಿ ಇವೆ. ಆ ಹುದ್ದೆಗಳಿಗೆ ಅರ್ಜಿ ಕರೆದಾಗ ಇವರನ್ನು ತೆಗೆದುಕೊಳ್ಳಿ. ರೋಸ್ಟರ್ ಪದ್ಧತಿ ಅಡ್ಡಿ ಇದ್ದರೆ ರೆಕ್ರೂಟ್ ಮಾಡುವಾಗ ಕೈಬಿಡಬೇಕಾಗಿತ್ತು. ಅವರು ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ. ಮುಂದುವೆ ಮುಂಜಿ ಮಾಡಿಕೊಂಡು ಏನೋ ಒಂದು ಆಸೆ ಇಟ್ಟುಕೊಂಡು ತೊಂದರೆಗೆ ಸಿಕ್ಕಿದ್ದಾರೆ. ಅವರನ್ನು ಕನ್‌ಫರ್ಮ್ ಮಾಡಿ. ಎಂದು ನಾವು ಹೇಳುತ್ತಿದ್ದೇವೆ. ಶಿಕ್ಷಕರ ಸಂಘದವರೂ ಹೇಳಿದ್ದಾರೆ. ಕನ್‌ಫರ್ಮ್ ಮಾಡುತ್ತೇವೆಂದು ಭರವಸೆ ಕೊಟ್ಟರೆ ಹೈಕೋರ್ಟಿನಿಂದ ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ ಹೊಸದಾಗಿ ರೆಕ್ರೂಟ್ ಮಾಡುವಾಗ ಅವರನ್ನು ಬಿಟ್ಟು ಬೇರೆಯವರನ್ನು ರೆಕ್ರೂಟ್ ಮಾಡುವುದಿಲ್ಲವೆಂಬ ಆಶ್ವಾಸನೆ ಕೊಟ್ಟರೆ ಒಳ್ಳೆಯದು. ಗೋವಿಂದೇಗೌಡರು ಹೋದಸಾರಿ ಅಧಿವೇಶನದಲ್ಲಿ ಅವರನ್ನು ತೆಗೆಯುವುದಿಲ್ಲವೆಂದು ಹೇಳಿದ್ದಾರೆ. ಆದರೆ ನೀವು ಏತಕ್ಕೆ ಹಿಂದಕ್ಕೆ ಹೋಗುತ್ತಿದ್ದೀರಿ ೧೫ಸಾವಿರ ಜನರಿಗೆ ಏತಕ್ಕೆ ಮೋಸ ಮಾಡುತ್ತಿದ್ದೀರಿ?

ಶ್ರೀ ಡಿ. ಮಂಜುನಾಥ.— ಅವರನ್ನು ತೆಗೆಯುವುದಿಲ್ಲ. ಅವರ ಜೊತೆಗೆ ೨೬ಸಾವಿರ ಜನ ಬೇಕಾಗಿದೆ ಎಂದು ಹೇಳಿದೆ. ಆದರೆ ಅಷ್ಟು ಜನ ಬೇಕಾಗಿಲ್ಲ. ಎಷ್ಟೇ ಜನ ಬೇಕಾಗಿರಲಿ ಇವರನ್ನು ಮಾತ್ರ ಮನೆಗೆ ಕಳುಹಿಸುವುದಿಲ್ಲ. ಈ ಬಗ್ಗೆ ಆಗಲೇ ಹೇಳಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಮನೆಗೆ ಕಳುಹಿಸುವುದಿಲ್ಲವೆಂದು ಹೇಳಿದರೆ ಆಯಿತು.

ಶ್ರೀ ಬಿ. ಎಸ್. ಎಡಿಯೂರಪ್ಪ.—ಹಂಗಾಮಿ ನೌಕರರು ಹೈಕೋರ್ಟಿಗೆ ಏತಕ್ಕೆ ಹೋದರು? ನೀವು ಅವರನ್ನು ತೆಗೆಯುವ ಪ್ರಯತ್ನ ಮಾಡಿದಾಗ ತೆಗೆಯಬೇಡಿ ಎಂದು ಕೋರ್ಟ್ ಮೊರೆ ಹೋಗಬೇಕಾಯಿತು. ಕೋರ್ಟಿನ ಆದೇಶದಿಂದ ಉಳಿದುಕೊಂಡಿದ್ದಾರೆ. ಅವರ ಬಗ್ಗೆ ಸಹಾನುಭೂತಿ ಇದೆ ಎಂದು ಹೇಳಿದಿರಿ. ಸಹಾನುಭೂತಿ ಇದ್ದರೆ ರೋಸ್ಟರ್ ಪದ್ಧತಿಯನ್ನನುಸರಿಸಿ ತೆಗೆದುಕೊಂಡು ಎರಡು ವರ್ಷ ಕೆಲಸ ಮಾಡಿದವರನ್ನು ತೆಗೆಯುವ ಪ್ರಯತ್ನ ಮಾಡುತ್ತಿರಲಿಲ್ಲ. ಅವರನ್ನು ತೆಗೆಯಬಾರದೆಂದು ಕೋರ್ಟ್ ಆದೇಶ ಕೊಟ್ಟಿದೆ. ಸುಮಾರು ೨೫ಸಾವಿರ ಹುದ್ದೆಗಳು ಖಾಲಿ ಇರುವ ಸಂದರ್ಭದಲ್ಲಿ ಅದಕ್ಕೆ ಬೇಕಾದ ಡಿಗ್ರಿ ಪಡೆದು ಎರಡು ವರ್ಷ ಅನುಭವ ಇರುವ ವ್ಯಕ್ತಿಗಳು ಕೆಲಸ ಮಾಡುತ್ತಿರುವಾಗ ರೆಕ್ರೂಟ್‌ಮೆಂಟ್ ಕಮಿಟಿ ಮಾಡಿ ೨ -೩ಸಾವಿರ ಕೊಡುವುದಕ್ಕೆ ಅವರನ್ನು ಏತಕ್ಕೆ ಅದರಲ್ಲಿ ಸಿಕ್ಕಿಸುತ್ತಿದ್ದೀರಿ ? ಆದ್ದರಿಂದ ನಾನು ಪ್ರಾರ್ಥಿಸುವುದೇನೆಂದರೆ ರೋಸ್ಟರ್ ಪದ್ಧತಿಯನ್ನನುಸರಿಸಿ ದಯವಿಟ್ಟು ಕನ್‌ಫರ್ಮ್ ಮಾಡಿ. ಅವರಿಗೆ ಜೀತದಾಳು ಎಂಬ ಶಬ್ದವನ್ನು ಏತಕ್ಕೆ ಉಪಯೋಗಿಸಿದರು ಎಂದರೆ ಹುದ್ದೆ ಖಾಲಿ ಇದ್ದಾಗ ಕರೆದು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿರಿ. ಅವರು ಗೊತ್ತಿಲ್ಲದೆ ಬರಬೇಕಾಯಿತು. ಎರಡು ವರ್ಷದಿಂದ ಕೆಲಸ ಮಾಡುತ್ತಿರುವವರಿಗೆ ರೆಕ್ರೂಟ್‌ಮೆಂಟ್ ಕಮಿಟಿ ಮಾಡಿದೆ ಎಂದರೆ ನಿಮ್ಮ ತಪ್ಪನ್ನು ಅವರ ಮೇಲೆ ಏತಕ್ಕೆ ಹೊರಿಸುತ್ತೀರಿ ? ನೀವು ಅವರನ್ನು ತೆಗೆದುಕೊಳ್ಳುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಿದ್ದೇವೆ, ಮೆರಿಟ್ ಅನ್ನು ಅನುಸರಿಸಿದ್ದೇವೆಂದು ಹೇಳಿದಿರಿ. ಅದಕ್ಕೋಸ್ಕರ ನಾನು ಪ್ರಾರ್ಥಿಸುವುದು ಅವರನ್ನು ಕೊಡಲೇ ಕನ್‌ಫರ್ಮ್ ಮಾಡಿ ಎಂದು. ನೀವು ಅವರನ್ನು ಖಾಯಂ ಮಾಡುತ್ತೇವೆಂದು ಹತ್ತು ಸಾವಿರ ಜನ ಶಿಕ್ಷಕರ ಮುಂದೆ ಸ್ಪಷ್ಟವಾಗಿ ಹೇಳಿದ್ದೀರಿ. ಸಚಿವ ಸಂಪುಟದ ಮುಂದೆ ವಿಚಾರವನ್ನು ಇಟ್ಟು ಖಾಯಂ ಮಾಡುವ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿರುವುದು ಪತ್ರಿಕೆಗಳಲ್ಲೆಲ್ಲ ಬಂದಿದೆ. ಆದ್ದರಿಂದ ನೀವು ನೇರ ನೇಮಕಾತಿ ಮಾಡಿಕೊಳ್ಳುವ ಮೊದಲು ಇವರನ್ನು ಖಾಯಂ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಈ ರೀತಿ ಅವ್ಯವಸ್ಥೆಯಲ್ಲಿದ್ದು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಇನ್ನೇ ದರ್ಜೆ ನೌಕರರಿಗೆ ನಿಮ್ಮ ಸರ್ಕಾರ ಬಂದಮೇಲೆ ಅನುಕೂಲ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಿಮ್ಮ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಹಾಗು ಅದರಂತೆಯೇ ಇವರನ್ನು ಖಾಯಂ ಮಾಡಿ ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಎಷ್ಟು ಸಮಯ ತೆಗೆದುಕೊಳ್ಳುವುದು ?

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದು ಬಹಳ ಪ್ರಾಮುಖ್ಯವಾದುದು. ಉತ್ತರ ಸರಿಯಾಗಿಲ್ಲ. ಅದಕ್ಕೆ ಹೇಳುವುದು, ಅವರೆಲ್ಲಾ ಮತ್ತೊಮ್ಮೆ ರೆಕ್ರೂಟ್‌ಮೆಂಟ್ ಕಮಿಟಿ ಮುಂದೆ ಹೋಗುವುದಕ್ಕೆ ಅವಕಾಶ ಕೊಡದೆ ತಾವೇ ಮಂತ್ರಿ ಮಂಡಲದ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ. ವಂಜುನಾಥ.— ಅವರು ಕೋರ್ಟಿಗೆ ಹೋದುದು ನಾವು ತೆಗೆಯುತ್ತೇವೆಂದಾಕ್ಷಣ ಅಲ್ಲ. ಜೂನಿಯರ್ ಕಾಲೇಜಿಗೆ ೮೦೦ಜನಉಪನ್ಯಾಸಕರನ್ನು ನೇಮಿಸಬೇಕೆಂದು ಸ್ಕ್ರಾಂಕ್ಷನ್ ಆದಾಗ ಒಂದು ಪಟ್ಟಿಯನ್ನು ಇಟ್ಟಿವು. ಅದರಲ್ಲಿ ಮುಕ್ಕಾಲುಭಾಗ ಇವರಿಗೆ ಸಿಕ್ಕಿದೆ. ಅದಕ್ಕೆ ಈಗ ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ಬಂದರೆ ತೊಂದರೆಯಾಗುತ್ತದೆಂದು ಕೋರ್ಟಿಗೆ ಹೋಗಿದ್ದಾರೆ. ಅವರನ್ನು ನಾವು ತೆಗೆಯುವುದಿಲ್ಲ, ಅವರು ಇದ್ದೇ ಇರುತ್ತಾರೆ. ಈಗ ವಿಷಯ ಕೋರ್ಟ್‌ನ ಮುಂದೆ ಇದೆ. ಅದು ಏನೇ ಆಗಲಿ ನಾನು ವಿಷಯವನ್ನು ಪರಿಶೀಲಿಸಿ ಸಚಿವ ಸಂಪುಟದ ಮುಂದೆ ತರುತ್ತೇನೆ ಮತ್ತು ಸಂಪುಟದ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಪಂಪಾಪತಿ.— ಇರುತ್ತಾರೆಂದು ಹೇಳುವುದಕ್ಕಿಂತ ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿದರೆ ಒಳ್ಳೆಯದಲ್ಲವೆ ?

ಶ್ರೀ ಆರ್. ವೆಂಕಟರಾವಯ್ಯ.— ಅವರನ್ನು ತೆಗೆಯುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

ಅಧ್ಯಕ್ಷರು.— ಈ ತರಹ ಎದ್ದು ಮಾತನಾಡುವುದು ಸರಿಯಲ್ಲ. ನಿಮಗೆ ನಿಯಮ ಗೊತ್ತಿಲ್ಲವೆ ?

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.— ಗೊತ್ತಿದೆ. ಅದಕ್ಕೆ ತಮ್ಮ ಗಮನ ಸೆಳೆಯುತ್ತಿದ್ದೇನೆ. ತಾವು ಅಪ್ಪಣೆ ಕೊಟ್ಟರೆ...

ಅಧ್ಯಕ್ಷರು.— ಅಪ್ಪಣೆ ಕೊಡುವುದಿಲ್ಲ. ಕೂರಿ.

ಶ್ರೀ ಯು. ಭೂಪತಿ — ಇಲ್ಲಿ ಕೆಲಸದಿಂದ ತೆಗೆಯುತ್ತಾರೆ ಅಥವಾ ಇಲ್ಲವೇ ಎಂಬ ಪ್ರಶ್ನೆ ಅಲ್ಲ. ಇದೇ ರೀತಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ಪ್ರಾಥಮಿಕ ಶಾಲೆಯಿಂದ ಪ್ರಥಮ ದರ್ಜೆ ಕಾಲೇಜಿನವರೆಗಿನ ಶಿಕ್ಷಕರ ಬಗ್ಗೆ ಹರಿಯಾಣ ಸರ್ವೋಚ್ಚ ನ್ಯಾಯಾಲಯದಿಂದ ಅಲ್ಲಿಯ ಸರ್ಕಾರಕ್ಕೆ ಒಂದು ಆದೇಶ ಬಂದಿದೆ. ಒಹುಶಃ ಸಚಿವರಿಗೆ ಅದು ಗೊತ್ತಿರಬಹುದು. ಅವರು ಕೆಲವು ತಿಂಗಳ ಹಿಂದೆ ಏನು ಹೇಳಿದ್ದಾರೆಂದರೆ ಎಕ್ಸಿಸ್ಟಿಂಗ್ ಅಪಾಯಿಂಟ್‌ಮೆಂಟ್ ರೂಲ್ಸ್ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಇರಬೇಕಾದರೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅಪಾಯಿಂಟ್ ಮಾಡುವುದು ತಪ್ಪು ಎಂದು ಹೇಳಿದ್ದಾರೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ರೆಕ್ರೂಟ್ ಮಾಡುವುದಕ್ಕೆ ಡಿಎಲ್‌ಆರ್‌ಸಿ. ಇದೆ, ಆದಾದಮೇಲೆ ಎಸ್‌ಎಲ್‌ಆರ್‌ಸಿ. ಕೆಪಿಎಸ್‌ಸಿ ಇರುವಾಗ, ರೂಲ್ಸ್ ಇರುವಾಗ ಕಾಂಟ್ರಾಕ್ಟ್ ಆಧಾರದ ಮೇಲೆ ಇವರನ್ನು ಅಪಾಯಿಂಟ್ ಮಾಡತಕ್ಕ ಸನ್ನಿವೇಶ ಹೇಗೆ ಬಂತು ? ಇದಕ್ಕೆ ಕಾರಣಗಳು ಏನು ? ಕಾಂಟ್ರಾಕ್ಟ್ ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಬೇಕಾದರೆ ರೋಸ್ಟರ್ ಸಿಸ್ಟಂ ಫಾಲೋ ಮಾಡಿದ್ದಾರೆಂಬುದರಲ್ಲೇನೂ ಅನುಮಾನ ಇಲ್ಲ. ಎಸ್.ಸಿ. ಎಸ್.ಟಿ. ರಿಸರ್ವೇಷನ್ ಪ್ರಕಾರ ಅಪಾಯಿಂಟ್‌ಮೆಂಟ್ ಆಗಿದೆ. ಈ ಬಗ್ಗೆ ಮೇಲಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಕೆಲವು ಕಡೆ

ಹಿಂದುಳಿದ ವರ್ಗಗಳಿಗೆ ಮತ್ತು ಹರಿಜನಗಿರಿಜನರಿಗೆ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಇದನ್ನು ಜನರಲೈಸ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಕೆಲವು ಜಿಲ್ಲೆಗಳಲ್ಲಿ ಮಾತ್ರ ಎಸ್.ಸಿ. ಎಸ್.ಟಿ.ಯವರಿಗೆ ಅನ್ಯಾಯವಾಗಿದೆ ಎಂಬುದು ನಿಜ. ರೋಸ್ಟರ್ ಸಿಸ್ಟಂ ಫಾಲೋ ಮಾಡಿ ಅಪಾಯಿಂಟ್ ಮಾಡಿದ ೧೦,೪೦೦ಜನ ಶಿಕ್ಷಕರಲ್ಲಿ ಎರಡು ವರ್ಷದಿಂದ ಕೆಲಸ ಮಾಡಿದ್ದಾರೆ. ಅವರನ್ನು ಹಾಗೆಯೇ ಖಾಯಂ ಮಾಡುವುದಕ್ಕೆ ಬಂದಂತಹ ತಕರಾರು ಏನು ? ಯಾವ ರೀತಿಯಾಗಿ ನೇಮಕಾತಿ ಮಾಡಬೇಕು ಎನ್ನುವ ಬಗ್ಗೆ ರೂಲ್ಸ್ ಇರುವಾಗ ಮತ್ತೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಟೀಚರ್ಸ್ ಅನ್ನು ಅಪಾಯಿಂಟ್ ಮಾಡುವುದಕ್ಕೆ ಕಾರಣವೇನು ? ಇರುವವರನ್ನು ಖಾಯಂ ಮಾಡದೆ ಮತ್ತೆ ಹೊಸಬರನ್ನು ಏತಕ್ಕೆ ಅಪಾಯಿಂಟ್ ಮಾಡುತ್ತೀರಿ ?

ಶ್ರೀ ಡಿ. ಮಂಜುನಾಥ್.—ಹೈಸ್ಕೂಲಿಗೆ ಮಾತ್ರ ತಕ್ಷಣ ರೆಕ್ರೂಟ್ ಮಾಡುವುದು ಕಷ್ಟವೆಂದು ಮಾಡಿದ್ದೇವೆ. ಕಾಂಟ್ರಾಕ್ಟ್ ಸಿಸ್ಟಂ ಆನ್ಲೇ ರದ್ದು ಮಾಡಬೇಕೆಂದು ಇದೆ. ಕಾರಣಾಂತರಗಳಿಂದ ರೆಕ್ರೂಟ್ ಮಾಡದೆ ಇರುವುದರಿಂದ ಈ ರೀತಿ ಆಗಿದೆ. ಅವರ ಬಗ್ಗೆ ಸರ್ಕಾರಕ್ಕೆ ಅನುಕಂಪ ಇದೆ ಎಂದು ಹೇಳಿದ್ದೇನೆ. ಅವರಿಗೆ ನಾವು ತೊಂದರೆ ಮಾಡುವುದಿಲ್ಲವೆಂದೂ ಹೇಳಿದ್ದೇನೆ. ಅಲ್ಲದೆ ಅವರ ವಿಚಾರವನ್ನು ಸಮಗ್ರವಾಗಿ ಪರಿಶೀಲಿಸಿ ಸಂಪುಟದ ಮುಂದೆ ತಂದು ಸಂಪುಟದ ತೀರ್ಮಾನ ತೆಗೆದು ಕೊಳ್ಳುತ್ತೇವೆಂದೂ ಹೇಳಿದ್ದೇನೆ.

ಶ್ರೀ ಭೂಪತಿಯವರು... ಅಧ್ಯಕ್ಷರೇ... .....

ಅಧ್ಯಕ್ಷರು.—ನೀವು ಬರುವುದಕ್ಕೆ ಮೊದಲು ಯಡಿಯೂರಪ್ಪನವರು, ಪಂಪಾಪತಿಯವರು, ಉಮರಬ್ಬನವರು ಚೀನ್ನಾಗಿ ಪ್ರಶ್ನೆ ಕೇಳಿದರು.

(ಗೊಂದಲ)

ಅಧ್ಯಕ್ಷರು.—ನೀವು ಗಮನ ಸೆಳೆಯುವ ಸೂಚನೆ ಇದರ ಮೇಲೆ ಸಾಕಷ್ಟು ಉತ್ತರಿಸಿದ್ದಾರೆ. ಮತ್ತೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ ದಯವಿಟ್ಟು ಕೂರಿ.

(ಗೊಂದಲ)

ಅಧ್ಯಕ್ಷರು —ಈ ರೀತಿ ಮಾತನಾಡಿದರೆ ಏನೂ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ ೪–೫ ಮಂದಿ ಸಾಕಷ್ಟು ವಿವರಣೆಯನ್ನು ಕೇಳಿದ್ದಾರೆ. ಖಿರ್ಗೆಯವರೆ, ದಯವಿಟ್ಟು ಕೂರಿ. ನೀವುಗಳು ಬರುವುದಕ್ಕೆ ಮೊದಲು ಸಾಕಷ್ಟು ವಿವರಣೆ ಕೇಳಿದ್ದಾರೆ.

ಅಧ್ಯಕ್ಷರು.—ಖಿರ್ಗೆಯವರು ನೀವು ಮಾತಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕೂಡ್ರಿ. ದಯವಿಟ್ಟು ಎಲ್ಲರೂ ಕೂಡ್ರಿ. ಮಾತನಾಡುವುದಕ್ಕೆ ಈಗ ನಿಮಗೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.—ಮಾನ್ಯ ಅಧ್ಯಕ್ಷರೇ,.....

ಶ್ರೀ ಆರ್. ರತ್ನಾಕರ್.—ಮಾನ್ಯ ಅಧ್ಯಕ್ಷರೇ,.....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕೂಡ್ರಿ. ಇದು ಗಮನ ಸೆಳೆಯುವ ಸೂಚನೆ ಕಾಲಿಂಗ್ ಅಟೆನ್ಷನ್ ತರಹ ನಿಮಗೆ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಯು. ಭೂಪತಿ.—ಮಂತ್ರಿಗಳು ಬರೀ ಅನುಕಂಪ ಇದೆ ಎಂದು ಹೇಳಿದರೆ ಹೊಟ್ಟೆ ತುಂಬುವುದಿಲ್ಲ.....

ಅಧ್ಯಕ್ಷರು. ಅವರು ಏನು ಹೇಳಿದ್ರು ಎಂದು ನಿಮಗೆ ಗೊತ್ತಿಲ್ಲ. ನೀವು ಲೇಟಾಗಿ ಬಂದ್ರಿ. ಅದೇನು ಕೇಳುತ್ತೀರೋ ಕೇಳ್ರಿ. ಕಣ್ಣು ಕೆಂಪಗೆ ಮಾಡುತ್ತೀರಿ.

ಶ್ರೀ ಯು. ಭೂಪತಿ.—ಅವರನ್ನು ಖಾಯಂ ಮಾಡುವುದಕ್ಕೆ ಸರ್ಕಾರಕ್ಕೆ ಇರುವಂಥ ತಕರಾರು ಏನು ? ಏತಕ್ಕೆ ಖಾಯಂ ಮಾಡುವುದಕ್ಕಾಗುವುದಿಲ್ಲ ಎನ್ನುವುದನ್ನು ಹೇಳಲಿ. ಡಿ.ಎಲ್.ಆರ್.ಸಿ. ಈ ತರಹ ಎಲ್ಲಾ ಕವಿಟಿಗಳು ಇರುವಾಗ ಕಂಟ್ರಾಕ್ಟ್ ಮೇಲೆ ಅಪಾಯಿಂಟ್ ಮಾಡತಕ್ಕಂಥ ಪ್ರಮೇಯ ಏತಕ್ಕೆ ಬರುತ್ತದೆ ? ಅದನ್ನು ದಯವಿಟ್ಟು ಹೇಳಬೇಕು.

ಶ್ರೀ ಡಿ. ಮಂಜುನಾಥ್.—ಉತ್ತರವನ್ನು ಆಗಲೇ ಹೇಳಿದ್ದೇನೆ. ಇನ್ನು ಏನು ಹೇಳಬೇಕೋ ನನಗಂತೂ ಅರ್ಥವಾಗುವುದಿಲ್ಲ.

ಅಧ್ಯಕ್ಷರು.—ವೀರಯ್ಯಸ್ವಾಮಿಯವರೇ ತಾವು ಕೇಳ್ರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.—ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು.—ಖಿರ್ಗೆಯವರೇ, ನೀವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ರೂಲ್ಸ್ ರೆಗು ಲೇಷನ್ ಎಲ್ಲಾ ತಪ್ಪಗೆ ಗೊತ್ತಿದೆ. ದಯವಿಟ್ಟು ಕೂತ್ರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗೊತ್ತಿದ್ದಕ್ಕೋಸ್ಕರ ತಮ್ಮ ಪರ್ಮಿಷನ್ ನ್ನು ಕೇಳುತ್ತಿರುವುದು. ಇಲ್ಲದೇ ಇದ್ದರೆ ಹಾಗೆಯೇ ಕೇಳುತ್ತಿದ್ದೆ.

ಅಧ್ಯಕ್ಷರು.—ಕೇಳಿ ವೀರಯ್ಯಸ್ವಾಮಿಯವರೇ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ,.....

ಅಧ್ಯಕ್ಷರು.—ಸಾಧ್ಯವಿಲ್ಲ, ದಯವಿಟ್ಟು ಕೂಡ್ರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಂತ್ರಿಗಳು ಮಾಡಿದಂಥ ಸ್ಟೇಟ್‌ಮೆಂಟ್ ಕಾಂಟ್ರಡಿಕ್ಟರಿ ಆಗಿದೆ. ಅದಕ್ಕೋಸ್ಕರವಾಗಿಯೇ ಕೇಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಖರ್ಗೆಯವರೇ ನೀವು ಮಾತನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕೂಡ್ರಿ.

(ಗೊಂದಲ)

ಅಧ್ಯಕ್ಷರು.—ಪಾಟೀಲರೇ, ಅವರಿಗೆ ಸ್ವಲ್ಪ ಹೇಳ್ರಿ. ಹೊಸದಾಗಿ ಬಂದ ಸದಸ್ಯರ ಹಾಗೆ ಮಾತನಾಡುತ್ತಿದ್ದಿರಲ್ಲ.

(ಗೊಂದಲ)

ಅಧ್ಯಕ್ಷರು.—ವೀರಯ್ಯಸ್ವಾಮಿಯವರೇ, ತಾವು ಮಂತ್ರಿಗಳ ಗಮನ ಸೆಳೆಯಿರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ಖರ್ಗೆಯವರೇ ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ, ದಯವಿಟ್ಟು ಕೂಡ್ರಿ.

(ಗೊಂದಲ)

ಅಧ್ಯಕ್ಷರು.—ತಾವು ರೂಲ್ಸ್ ರೆಗ್ಯುಲೇಷನ್ ಎಲ್ಲಾ ಗಾಳಿಗೆ ತೂರುತ್ತಿದ್ದೀರಿ. ವೀರಯ್ಯ ಸ್ವಾಮಿಯವರೇ ಕೇಳ್ರಿ.

(ii) ಚಿಂಚೋಳಿಯಲ್ಲಿರುವ ಸರ್ಕಾರಿ ಆಸ್ಪತ್ರೆ ಕಂಸಿದಂಬಿದ್ದು ರೋಗಿಗಳಿಗೆ ತೊಂದರೆಯಂಟಾಗಿರುವ ಬಗ್ಗೆ

ಶ್ರೀ ಎಂ. ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಚಿಂಚೋಳಿಯಲ್ಲಿರುವ ಸರ್ಕಾರಿ ಆಸ್ಪತ್ರೆ ಕುಸಿದುಬಿದ್ದು ರೋಗಿಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

ಗುಲ್ಬರ್ಗಾ ಜಿಲ್ಲೆಯಲ್ಲಿಯ ಚಿಂಚೋಳಿಯ ೨೫ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯ ಕಟ್ಟಡದ ಒಂದು ಭಾಗಕ್ಕೆ ತೀವ್ರ ಹಾನಿಯಾಗಿರುತ್ತದೆ. ಈ ಕಾರಣದಿಂದ ಈ ಭಾಗವನ್ನು ಉಪಯೋಗಿಸುತ್ತಿಲ್ಲ.

೨. ಸಾರ್ವಜನಿಕ ಆಸ್ಪತ್ರೆಯ ಉಳಿದ ಭಾಗದಲ್ಲಿ ತುರ್ತು ರೋಗಿಗಳೂ ಸೇರಿದಂತೆ ನಿಯಮಿತ ಸಂಖ್ಯೆಯ ಒಳರೋಗಿಗಳಿಗೆ ಹಾಸಿಗೆ ಹಾಗೂ ಇತರೆ ವ್ಯವಸ್ಥೆ ಮಾಡಲಾಗಿದೆ. ಇದರಿಂದ ರೋಗಿಗಳಿಗೆ ವೈದ್ಯಕೀಯ ಸೌಲಭ್ಯ ದೊರಕುವಲ್ಲಿ ತೊಂದರೆಯು ಆಗಿಲ್ಲ.

೩. ಹಾನಿಗೊಳಗಾಗಿರುವ ಆಸ್ಪತ್ರೆ ಕಟ್ಟಡದ ಭಾಗವನ್ನು ಶೀಘ್ರವಾಗಿ ದುರಸ್ತಿ ಮಾಡಲು ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ) (ಉತ್ತರ) ಧಾರವಾಡ ಇವರಿಗೆ ತಿಳಿಸಲಾಗಿದೆ. ದುರಸ್ತಿ ಕಾರ್ಯವನ್ನು ಶೀಘ್ರವೇ ಕೈಗೊಳ್ಳುವುದಕ್ಕೆ ಏರ್ಪಾಡು ಮಾಡಲಾಗುವುದು.